

ಅದೇಕೋ ಚಿಕ್ಕಂದಿನಲ್ಲಿ ನಾನು ಹಿಡಿದ ಬಾವುಟ ನನ್ನ ಕನಸಿನಲ್ಲಿ ದಿನಾಲೂ ಸುಳಿತಿತ್ತು. ಆಗಾಗ ರ್‍ಯಾಲಿ ನೋಡೋದಕ್ಕೆ ಜಾಥಾ ನೋಡೋದಕ್ಕೆ ಹೋಗ್ತಿದ್ದೆ. ಆಗ ಚಳವಳಿಗಳಲ್ಲಿ ಇದ್ದವರು ಮೈಯಲ್ಲಿ ಆವೇಶ ಹೊಕ್ಕವರಂಗೆ ಬುಸುಗುಟ್ಟೋದನ್ನು ನೋಡ್ತಿದ್ದೆ. ಹಾಗೆಯೇ ಹೋರಾಟದಲ್ಲಿ ಎಲ್ಲವನ್ನೂ ಕಳ್ಕೊಂಡು ಬೀದಿಗೆ ಬೀಳ್ತಿದ್ದವರನ್ನೂ ನೋಡ್ತಿದ್ದೆ. ಕ್ರಮೇಣ ನನ್ನ ಬದುಕಿಗೆ ಯಾರ್‍ಯಾರೋ ಪ್ರವೇಶ ಮಾಡಿದ್ರು. ಕೃಷ್ಣರಾಯರಂತೂ ಎದೆ ಒಳಗಿನ ಚಿತ್ರವಾಗಿ ಕೂತುಬಿಟ್ಟಿದ್ರು. ಶ್ರೀರಾಂಪುರದ ಬ್ರಿಡ್ಜಿನ ಮೇಲೆ ರೈಲು ತಡೆ ಸತ್ಯಾಗ್ರಹ ಮಾಡೋವಾಗ ಗೋವಿಂದರಾಜು ರೈಲಿಗೆ ಸಿಕ್ಕಿ ಸತ್ತು ಹೋದ. ಅವನ ಸಾವಿನಿಂದ ಅವನ ಕುಟುಂಬ ತಲ್ಲಣಿಸಿದ್ದನ್ನು ನೋಡಿದ ಮೇಲಂತೂ ನನ್ನಿಂದ ಸುಮ್ಮನಿರಲಾಗಲಿಲ್ಲ. ಆದರೆ ಸರ್ಕಾರಿ ಉದ್ಯೋಗ ನನ್ನ ಕೈಯನ್ನು ಕಟ್ಟಿ ಹಾಕ್ತಿತ್ತು. ಹೋರಾಟದ ಹಂಬಲ ತಡೀಲಾಗದೆ ಕೆಲಸಕ್ಕೆ ರಾಜೀನಾಮೆ ಕೊಟ್ಟೆ.

ನಾನು ಕೆಲಸ ಬಿಟ್ಟಿದ್ದಕ್ಕೆ ಅಪ್ಪ ನಮ್ಮಿಬ್ಬರ ವಯಸ್ಸನ್ನೆ ಮರೆತವನಂಗೆ ಕೂಗಾಡಿದ್ದ. ಚಿಕ್ಕಂದಿನಲ್ಲಿ ನಾನು ಶಾಲೆ ತಪ್ಪಿಸಿಕೊಂಡಿದ್ದಕ್ಕೆ ಎಂತಾ ಹುಯಿಲೆಬ್ಬಿಸಿದ್ದನಲ್ಲ. ಅದೇ ಈಗಲೂ ಆಯ್ತು. ಸುತ್ತಲ ನಾಲ್ಕಾರು ಮನೆಯ ಜನ ಜಮಾಯಿಸಿದ್ರು. ಚಿಕ್ಕೋನಿದ್ದಾಗ ಶಾಲೆ ತಪ್ಪಿಸಿದ್ದಕ್ಕೆ ನನ್ನನ್ನು ಎದೆಗಪ್ಪಿಕೊಂಡು ಅತ್ತು ದಾರಿಗೆ ತಂದಿದ್ದ ಅಪ್ಪ. ಈಗ ಹಾಗೇನೂ ಮಾಡಲಿಲ್ಲ. ಗಂಟಲ ತನಕ ಕುಡಿದು ಬಂದು ನಡು ರಾತ್ರಿಯವರೆಗೆ ರೋದಿಸಿದ್ದ. ಆಮೇಲೆ ದಿನಾ ಮೈಮೇಲೆ ಜ್ಞಾನ ಉಳಿಯದಷ್ಟು ಕುಡೀತಿದ್ದ. ಮನೆ ಜಗುಲಿಯ ಮೇಲೆ ಅಸ್ತವ್ಯಸ್ತವಾಗಿ ಮಲಗಿ ತನ್ನ ಗೋಳನ್ನು ಹತ್ತು ವರ್ಷಗಳ ಹಿಂದೇನೆ ಸತ್ತುಹೋಯ್ತಲ್ಲ ನನ್ನಮ್ಮ, ಆ ನನ್ನಮ್ಮನಿಗೆ ಹೇಳಿಕೊಳ್ತಿದ್ದ. ನನಗೇಂತ ಎಲ್ಲ ಸಂಕಟಾನೂ ನುಂಗಿಕೊಂಡಿದ್ದ ಅಪ್ಪ ಈಗ ಎಲ್ಲವನ್ನೂ ಕಾರಿಕೊಳ್ತಿದ್ದ. ಎರಡು ಮಕ್ಕಳ ತಂದೆ ನಾನು. ಆದ್ರೂ ನನ್ನ ಬಗ್ಗೆ ಅಪ್ಪನಿಗಿದ್ದ ಪ್ರೀತಿ ನನ್ನನ್ನ ಬೆಚ್ಚಿ ಬೀಳಿಸಿತ್ತು.

ಅದಾದ ಆರು ತಿಂಗಳಿಗೆ ನನ್ನಪ್ಪ ಮಲಗಿದ್ದಲ್ಲೇ ಜೀವ ಬಿಟ್ಟಿದ್ದ. ಸರ್ಕಾರಿ ಕೆಲಸ ಬಿಟ್ಟು ಮಗ ತನಗೆ ನಿರಾಸೆ ಮಾಡಿದಾಂತ ಕೊರಗಿ ನನ್ನಪ್ಪ ಸತ್ತನೋ ಅಥವಾ ಎಂದೋ ತೀರಿಕೊಂಡ ಹೆಂಡತಿಯ ನೆನಪು ಕಾಡಿದ್ದು ಹೆಚ್ಚಾಗಿ ಸತ್ತನೋ ಅಥವಾ ಕುಡಿತದ ದಾಸನಾಗಿ ಸತ್ತನೋ ನನಗರ್ಥ ಆಗಲಿಲ್ಲ. ಆದರೂ ಲೋಕಜ್ಞಾನ ಇರೋ ಮಗನ ನಿರ್ಧಾರ ಇಳಿವಯಸ್ಸಿನ ತಂದೇನ ಇಷ್ಟೆಲ್ಲ ಕಂಗೆಡಿಸಲಿಕ್ಕೆ ಸಾಧ್ಯಾನಾ? ಇದಂತೂ ನನಗೆ ಬಗೆಹರೀಲೇ ಇಲ್ಲ. ಅಜ್ಜನ ಸಾವಿನಿಂದ ನನ್ನ ಮಕ್ಕಳು ಕಂಗಾಲಾಗಿಬಿಟ್ರು. ಅವರ ಕಣ್ಣಲ್ಲಿ ಉಕ್ಕುತಾ ಇದ್ದ ಪ್ರಶ್ನೆಗೆ ನನ್ನಲ್ಲಿ ಯಾವ ಉತ್ತರಾನೂ ಇರ್ಲಿಲ್ಲ. ಅದಕ್ಕೆ ಆ ಮಕ್ಕಳ ಕಣ್ತಪ್ಪಿಸಿ ಓಡಾಡ್ತಿದ್ದೆ.